**FDP 6-13** **CW.2**

**ಸಾಕ್ಷಿಯನ್ನು ದಿನಾಂಕಃ 23.01.2020 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಎಸ್ ಬಿ ವಕೀಲರಿಂದ 1 ನೇ ಎದುರುದಾರರ ಪರವಾಗಿಃ-**

..7.. ಸಿ ಟಿ ಎಸ್ ನಂಃ 2194 ಹಾಗೂ 1931 ಇವುಗಳಲ್ಲಿ ಸಾಕಷ್ಟು ಸಬ್ ಡಿವಿಜನ್ ಗಳು ಆಗಿವೆಂದರೆ ಸರಿ. ಆದಕಾರಣ ಮೂಲ ನಂಬರುಗಳು ಅಂದರೆ ಸಿ ಟಿ ಎಸ್ ನಂಃ 2194 ಹಾಗೂ 1931 ಅವುಗಳು ಅಸ್ತಿತ್ವದಲ್ಲಿಲ್ಲವೆಂದರೆ ಸರಿ. ವಾರ್ಡ ನಂ-1 ಕ್ಕೆ ನನ್ನ ಕರ್ತವ್ಯವಿದ್ದು, ಎಕ್ಸಟೆನ್ಸ ಗೆ ಮಾತ್ರ ನಾನು ಪ್ರಭಾರ ಇರುತ್ತೇನೆ.

..8.. ನ್ಯಾಯಾಲಯದಿಂದ ನನಗೆ ಸಿ ಟಿ ಎಸ್ ನಂಃ 1939, 1940, 2193, ಹಾಗೂ 2194 ಗಳನ್ನು ಅಳತೆ ಮಾಡಲು ಆದೇಶವಾಗಿತ್ತು. ಸಿ ಟಿ ಎಸ್ ನಂಃ 2193 ರಲ್ಲಿ ಉಪವಿಭಾಗಗಳಾಗಿಲ್ಲ, ಆದರೆ 1940 ರಲ್ಲಿ ಉಪವಿಭಾಗಗಳಾಗಿವೆ. ಸಾಕ್ಷಿ ಪುನ್ಹಃ ಹೇಳುತ್ತಾರೆ ಸಿ ಟಿ ಎಸ್ ನಂಃ 1940 ರಲ್ಲಿ ಉಪವಿಭಾಗವಾಗಿಲ್ಲ, 1939 ರಲ್ಲಿ ಉಪವಿಭಾಗಗಳಾಗಿವೆ. ಸಿ ಟಿ ಎಸ್ ನಂಃ 1939 ಈ ನಂಬರ ಈಗ ಅಸ್ತಿತ್ವದಲ್ಲಿವೆಂದರೆ ಸರಿ.

..9.. ಅಳತೆ ಹಾಗೂ ವಿಭಾಗ ಮಾಡುವ ಮೊದಲು ನ್ಯಾಯಾಲಯದಿಂದ ಬಂದ ದಾಖಲೆಗಳು ಹಾಗೂ ನಮ್ಮ ಕಚೇರಿಯಲ್ಲಿರುವ ದಾಖಲೆಗಳನ್ನು ನಾವು ಒಂದಕ್ಕೊಂದು ತಾಳೆ ಮಾಡಿ ನೋಡುತ್ತೇವೆಂದರೆ ಸರಿ. ಈ ಪ್ರಕರಣದಲ್ಲಿ ನಾಲ್ಯಯಾಲಯದಿಂದ ಕೇವಲ ಡಿಕ್ರಿ ಪ್ರತಿ ಬಂದಿತ್ತು ಎಂದರೆ ಸರಿ. ಡಿಕ್ರಿ ಪ್ರತಿಯನ್ನು ನಮ್ಮ ದಾಖಲೆಗಳೊಂದಿಗೆ ತಾಳೆ ಮಾಡಿ ನೋಡಿರುತ್ತೇವೆಂದರೆ ಸರಿ. ಸಿ ಟಿ ಎಸ್ ನಂಃ 1940 ಹಾಗೂ 2193 ಮಾತ್ರ ಅಖಂಡ ಉಳಿದಿದ್ದು, ಉಳಿದ ಸಿ ಟಿ ಎಸ್ ನಂಃ 2194 ಹಾಗೂ 1939 ಅಖಂಡವಾಗಿ ಉಳಿದಿಲ್ಲವೆಂದು ನ್ಯಾಯಾಲಯಕ್ಕೆ ತಿಳಿಸಿಲ್ಲವೆಂದರೆ ಸರಿ. ಸಾಕ್ಷಿ ಸ್ವತಃ ಹೇಳುತ್ತಾರೆ,ನನ್ನ ನಕ್ಷೆಯಲ್ಲಿ ನಮೂದಿಸಿದ್ದೇನೆ. ವ್ಯತ್ಯಾಸಗಳು ಕಂಡುಬಂದ ಮೇಲೆ ನ್ಯಾಯಾಲಯದಿಂದ ನಾನು ಸ್ಪಷೀಕರಣ ಪಡೆದುಕೊಂಡಿಲ್ಲ. ಈ ರೀತಿ ನ್ಯಾಯಾಲಯದಿಂದ ಸ್ಪಷ್ಟೀಕರಣ ಪಡೆದುಕೊಳ್ಳದೇ ಅಳತೆ ಕೆಲಸ ಪೂರ್ಣಗೂಳಿಸಿ ವರದಿ ಸಲ್ಲಿಸಿದರೆ, ಅದು ವ್ಯತ್ಯಾಸ ಬರುತ್ತದೆ ಹಾಗೂ ಅದು ತಪ್ಪುಗಳಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

..10.. ಉಪವಿಭಾಗವಾದಂತಹ ಸಿ ಟಿ ಎಸ್ ನಂಬರುಗಳ ಆಸ್ತಿಗಳನ್ನು ಅಳತೆ ಮಾಡಿ ವರದಿ ಸಲ್ಲಿಸಲು ನ್ಯಾಯಾಲಯ ಆದೇಶಿಸಿರಲಿಲ್ಲವೆಂದರೆ ಸರಿ. ಈ ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ ಉಪ-ವಿಭಾಗಗಳು ಅಂದಾಜು 20 ವರ್ಷಗಳ ಹಿಂದೆ ಆಗಿವೆಂದರೆ ಸರಿ. ಈ ದಾವಾ ಆಸ್ತಿಗಳ ಕುರಿತು ಪ್ರಾಥಮಿಕ ಡಿಕ್ರಿಗೆ ಅಳತೆಗಳನ್ನು ನಮೂದಿಸಿಲ್ಲವೆಂದರೆ ಸರಿ. ಇವುಗಳ ಕ್ಷೇತ್ರಗಳ ಬಗ್ಗೆ ನ್ಯಾಯಾಲಯಕ್ಕೆ ನಾನು ಪತ್ರ ಬರೆದು ಸ್ಪಷ್ಟೀಕರಣ ಪಡೆದುಕೊಂಡಿಲ್ಲವೆಂದರೆ ಸರಿ. ಉಪವಿಭಾಗಗಳಾಗುವ ಮೊದಲು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವ್ಯವಹಾರಗಳು ಅದಕ್ಕಿಂತ ಮೊದಲೇ ಆಗಿವೆಂದರೆ ಸರಿ.

ಪ್ರಶ್ನೆಃ- ಉಪವಿಭಾಗಗಳನ್ನು ದಾವಾ ಆಸ್ತಿಗಳ ಕುರಿತು ನಮೂದಿಸದೇ ಇರುವ ಕಾರಣ, ಕ್ಷೇತ್ರಗಳ ವಿವರಣೆ ಇಲ್ಲದೆ ಇರುವ ಕಾರಣ, ಆ ಕುರಿತು ಅಳತೆ ಮಾಡಿ ವರದಿ ಸಲ್ಲಿಸುವುದು ಸೂಕ್ತ ಅಲ್ಲ?

ಉತ್ತರಃ- ನನ್ನ ವರದಿಯೊಳಗೆ ಆ ಕುರಿತು ಸ್ಪಷ್ಟವಾಗಿ ನಮೂದಿಸಿದ್ದೇನೆ, ಕಾರಣ ಅಲ್ಲಿ ಅಸ್ಪಷ್ಟತೆ ಇಲ್ಲಾ.

..11.. ನನಗೆ ಬಂದಂತಹ ವಾರಂಟದಲ್ಲಿ ಸದರಿ ದಾವಾ ಆಸ್ತಿಗಳ ಇಂತಿಷ್ಟೆ ಕ್ಷೇತ್ರವನ್ನು ಅಳತೆ ಮಾಡಿ ವರದಿ ಸಲ್ಲಿಸಲು ನಮೂದಿಸಿರಲಿಲ್ಲವೆಂದರೆ ಸರಿ. ಪ್ರಾಥಮಿಕ ಡಿಕ್ರಿಯಲ್ಲಿ ಈ ದಾವಾ ಆಸ್ತಿಗಳ ಚಕ್ಕುಬಂದಿ ತೋರಿಸಲಾಗಿದೆ. ಅಳತೆ/ಕ್ಷೇತ್ರ ಇಲ್ಲದ ಆಸ್ತಿಗಳನ್ನು ಅಳತೆ ಮಾಡಲು ಕರ್ನಾಟಕ ಕಂದಾಯ ಅಧಿನಿಯಮ ಹಾಗೂ ನಮ್ಮ ಸರ್ವೆ ಮ್ಯಾನುವೆಲ್ ದಲ್ಲಿ ನಮಗೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಎರಡು ಅಧಿನಿಯಮಗಳನ್ನು ಓದಿ ತಿಳಿದುಕೊಂಡಿಲ್ಲ.

..12.. ದಿಃ 13.10.2017 ರಂದು ಈ ಮೊದಲು ಇದೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಾಕ್ಷಿ ನುಡಿದಿದ್ದು, ನಾನು ಆ ದಿನ ಪಾಟಿ ಸವಾಲನ್ನು ಸಹ ಎದುರಿಸಿದ್ದೆ ಎಂದರೆ ಸರಿ. ಆಗ ನಾನು ಕರ್ನಾಟಕ ಭೂ-ಕಂದಾಯ ಕಾಯ್ದೆ ಹಾಗೂ ಸರ್ವೆ ಮ್ಯಾನುವೆಲ್ ಗಳನ್ನು ಓದಿರುತ್ತೇನೆ. ಅಳತೆಯು ವಿಷಯದಲ್ಲಿ ಗೊಂದಲವಿದ್ದಾಗ ಆ ಕಾಲಕ್ಕೆ ಸರ್ವೆ ಕಾರ್ಯ ಪೂರೈಸಲು ಬರುವುದಿಲ್ಲವೆಂದು, ಸರ್ವೆ ಮ್ಯಾನುವೆಲ್ ದಲ್ಲಿ ತಿಳಿಸಲಾಗಿದೆ ಎನ್ನುವುದು ನಿಜ ಅಂತಾ ಸಾಕ್ಷಿ ನುಡಿದಿದ್ದೇನೆಂದರೆ ಸರಿ. ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವಾಗ, ಸುಳ್ಳು ಸಾಕ್ಷಿ ನುಡಿದರೆ ಅದರ ಪರಿಣಾಮ ಏನಾಗುತ್ತದೆ ಎನ್ನುವುದು ನನಗೆ ಗೊತ್ತಿದೆ.

**FDP 6-13** **CW.2**

ಈ ಮೊದಲು ಹೇಳಿದಂತಹ ಸಾಕ್ಷಿ ಸತ್ಯವೇ ಅಥವಾ ಈ ದಿನ ಹೇಳಿದ ಸಾಕ್ಷಿ ನಿಜವೇ ಅಂತಾ ಕೇಳಿದ ಪ್ರಶ್ನೆಗೆ ನಿಮ್ಮ ಉತ್ತರವೇನು? ಸಾಕ್ಷಿದಾರ ತುಂಬಾ ಹೊತ್ತು ವಿಚಾರ ಮಾಡಿ ಮೌನವಾಗಿರುತ್ತಾರೆ.

**ಈ ಹಂತದಲ್ಲಿ ಸಾಕ್ಷಿದಾರನ ಕೋರಿಕೆಯ ಮೇರೆಗೆ ಪಾಟಿ ಸವಾಲಿಗಾಗಿ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
**ಹುಬ್ಬಳ್ಳಿ.**